**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ 10038/2021**

ಪಿಡಬ್ಲೂ– 14

**ಪ್ರಮಾಣ ವಚನ ಭೋದಿಸಿದ ದಿನಾಂಕಃ 28–07–2025.**

(ಪ್ರಾಸಾ – 14 ರವರನ್ನು ವಿಚಾರಿಸಿದಾಗ ಅವರು ನನಗೆ ಕಿವಿ ಕೇಳಿಸುತ್ತದೆ, ಆದರೆ ಮಾತನಾಡಲು ಆಗುವುದಿಲ್ಲ ಎಂದು ಕೈ ಸನ್ನೆಯಿಂದ ಹೇಳುತ್ತಾರೆ. ಆದ್ದರಿಂದ ಆರೋಪಿ ಪರ ವಕೀಲರ ಪಾಟೀಸವಾಲಿನ ಪ್ರಶ್ನೆಗಳನ್ನು ಸಾಕ್ಷಿಗೆ ಹೇಳಿ, ಸಾಕ್ಷಿಯು ಪಾಟೀಸವಾಲಿನ ಪ್ರಶ್ನೆಗಳಿಗೆ ಉತ್ತರವನ್ನು ಹಾಳೆಯಲ್ಲಿ ಬರೆದು ಮತ್ತು ಕೈ ಸನ್ನೆಯಿಂದ ಹೇಳಿರುತ್ತಾರೆ. ಪಾಟೀಸವಾಲು ಪ್ರಶ್ನೆ ಮತ್ತು ಸಾಕ್ಷಿಯು ಹಾಳೆಯಲ್ಲಿ ಬರೆದುಕೊಟ್ಟ ಉತ್ತರ ಮತ್ತು ಕೈ ಸನ್ನೆಯಲ್ಲಿ ಹೇಳಿದ ಉತ್ತರವನ್ನು ಈ ಕೆಳಕಂಡಂತೆ ತೆಗೆದುಕೊಳ್ಳಲಾಯಿತು)

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಟಿ ಬಿ ಎಂ ವಕೀಲರಿಂದಃ**

ಪ್ರಶ್ನೆಃ 1) ನಿಮ್ಮ ಮನೆಯಲ್ಲಿ ಒಂದು ಜೆ ಸಿ ಬಿ ಯನ್ನು ಬಾಡಿಗೆಗೆ ಹೊಡೆಯಲು ಇಟ್ಟುಕೊಂಡಿದ್ದೀರಾ ?

ಉತ್ತರಃ ಹೌದು.

ಪ್ರಶ್ನೆಃ 2) ಚೇತನ್ ನನ್ನ ಅಣ್ಣ?

ಉತ್ತರಃ ಸರಿ

ಪ್ರಶ್ನೆಃ 3) ಚೇತನ್ ಸದರಿ ಜೆ ಸಿ ಬಿ ಯನ್ನು ಚಾಲನೆ ಮಾಡುತ್ತಾನೆಯೇ?

ಉತ್ತರಃ ಇಲ್ಲ, ಜೆ ಸಿ ಬಿ ಯನ್ನು ನಾನು ಚಾಲನೆ ಮಾಡುತ್ತೇನೆ.

ಪ್ರಶ್ನೆಃ 4) ನಮ್ಮ ಮನೆಯ ಹಿತ್ತಲಿನಲ್ಲಿ ನಮ್ಮ ತೋಟ ಇರುತ್ತದೆ, ಅದರ ಪಕ್ಕದಲ್ಲಿ 1 ನೇ ಆರೋಪಿಯ ಮನೆಯವರ ಹಿತ್ತಲು , ಕೊಟ್ಟಿಗೆ ಮನೆ ಮತ್ತು ತೋಟ ಇರುತ್ತದೆ ?

ಉತ್ತರಃ ಸರಿ.

ಪ್ರಶ್ನೆಃ 5) ಜೆ ಸಿ ಬಿ ಮುಂದೆ ಒಂದು ಕಬ್ಬಿಣದ ಬಕೆಟ್ ಇರುತ್ತದೆ ?

ಉತ್ತರಃ ಸರಿ.

ಪ್ರಶ್ನೆಃ 6) ದಿನಾಂಕಃ 09-06-2019 ರಂದು ರಾತ್ರಿ 8-00 ಗಂಟೆಗೆ ನಾನು ಮತ್ತು ನನ್ನ ಅಣ್ಣ ಚೇತನ್ ಜೆ ಸಿ ಬಿ ಯಿಂದ 1 ನೇ ಆರೋಪಿಯ ಮನೆಯ ಹಿತ್ತಲಿನಲ್ಲಿದ್ದ ಕೊಟ್ಟಿಗೆ ಮನೆ ಮತ್ತು ಶೌಚಾಲಯವನ್ನು ಕೆಡವಿರುತ್ತೇವೆ ?

ಉತ್ತರಃ ಇಲ್ಲ.

ಪ್ರಶ್ನೆಃ 7) ದಿನಾಂಕಃ 09-06-2019 ರಂದು ಸಂಜೆ 7-00 ಗಂಟೆಗೆ ನನ್ನನ್ನು ಮತ್ತು ನನ್ನ ಅಣ್ಣ ಚೇತನ್ ಅನ್ನು ಚಾಸಾ3 ಪ್ರವೀಣ ಗಲಾಟೆ ಸ್ಥಳದಿಂದ ನಮ್ಮನ್ನು ಕರೆದುಕೊಂಡು ಬಂದು ನಮ್ಮ ಮನೆಗೆ ಬಿಟ್ಟು ಹೋಗಿರುತ್ತಾರೆ?

ಉತ್ತರಃ ಸರಿ.

ಪ್ರಶ್ನೆಃ 8) ನಂತರ ಅದೇ ದಿವಸ ರಾತ್ರಿ 7-30 ಗಂಟೆಗೆ ನಾನು ಮತ್ತು ನನ್ನ ಅಣ್ಣ ಚೇತನ್ ಜೆ ಸಿ ಬಿಯನ್ನು ತೆಗೆದುಕೊಂಡು ಹೋಗಿ 1 ನೇ ಆರೋಪಿಯ ಮನೆಯ ಹಿತ್ತಲಿನಲ್ಲಿದ್ದ ಶೆಡ್ ನ್ನು ಮತ್ತು ಶೌಚಾಲಯಗಳನ್ನು ಕೆಡವಿ, 1 ನೇ ಆರೋಪಿ ಮತ್ತು ಆತನ ಹೆಂಡತಿಗೆ ನಾನು ಮತ್ತು ನನ್ನ ಅಣ್ಣ ಚೇತನ್ ಹಲ್ಲೆ ಮಾಡಿರುತ್ತೇವೆ, ನಾವು ಜೆ ಸಿ ಬಿ ಯಿಂದ 1 ನೇ ಆರೋಪಿಯ ಶೆಡ್ ನ್ನು ಕೆಡವುವಾಗ ಜೆ ಸಿ ಬಿ ಯ ಕಬ್ಬಿಣದ ಬಕೇಟ್ ನನ್ನ ತಲೆಗೆ ಹೊಡೆದಿದ್ದರಿಂದ ನನಗೆ ತಲೆಗೆ ಗಾಯ ಆಗಿರುತ್ತದೆ ?

ಉತ್ತರಃ ಸರಿಯಲ್ಲ. ಸಾಕ್ಷಿ ಕೈ ಸನ್ನೆಯಿಂದ ಆರೋಪಿತರು ನನಗೆ ಕಲ್ಲಿನಿಂದ ಹೊಡೆದಿರುತ್ತಾರೆ ಎಂದು ಹೇಳುತ್ತಾರೆ

ಪ್ರಶ್ನೆಃ 9) ನಾನು ಮತ್ತು ನನ್ನ ಅಣ್ಣ ಚೇತನ್ 1 ನೇ ಆರೋಪಿಗೆ ಮತ್ತು ಆತನ ಹೆಂಡತಿಗೆ ಹಲ್ಲೆ ಮಾಡಿದ್ದರಿಂದ ಅವರನ್ನು ದಿನಾಂಕಃ 09-06-2019 ರ ರಾತ್ರಿ ಚಿಕಿತ್ಸೆಗಾಗಿ ಸೊರಬ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ ?

ಉತ್ತರಃ ಸರಿಯಲ್ಲ.

ಪ್ರಶ್ನೆಃ 10)1 ನೇ ಆರೋಪಿ ಮತ್ತು ಆತನ ಹೆಂಡತಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಸೊರಬ ಆಸ್ಪತ್ರೆಯಿಂದ ಸಾಗರದ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ 11) 1 ನೇ ಆರೋಪಿಯನ್ನು ಬಿಟ್ಟರೆ ಬೇರೆ ಆರೋಪಿತರಿಗೂ ಮತ್ತು ನಮಗೂ ಯಾವುದೇ ಜಗಳ ಮತ್ತು ದ್ವೇಷ ಇರಲಿಲ್ಲ ?

ಉತ್ತರಃ ಸರಿ, ರಾಜಪ್ಪ, ಪರಸಪ್ಪ, ಮಳ್ಳಿರಮೇಶ ಕಲ್ಲಿನಿಂದ ತಲೆಗೆ ಹೊಡೆದಿರುತ್ತಾರೆ.

ಪ್ರಶ್ನೆಃ 12) ಚಾಸಾ3 ಪ್ರವೀಣ ನನ್ನ ಮತ್ತು ನನ್ನ ಅಣ್ಣ ಚೇತನ್ ನ್ನು ನಮ್ಮ ಮನೆಗೆ ಕರೆದುಕೊಂಡು ಬಿಟ್ಟು ಹೋದ ಮೇಲೆ ನೀವು ಪುನಃ ಗಲಾಟೆಯಾದ ಸ್ಥಳಕ್ಕೆ ಹೋಗಿದ್ದಿರಾ?

ಉತ್ತರಃ ಇಲ್ಲ.

ಪ್ರಶ್ನೆಃ 13) ನಾನು ಮತ್ತು ನನ್ನ ಅಣ್ಣ ಜೆ ಸಿ ಬಿ ಯಿಂದ 1 ನೇ ಆರೋಪಿಯ ಶೆಡ್ ನ್ನು ಕೆಡವುವಾಗ ಜೆ ಸಿ ಬಿ ಯ ಕಬ್ಬಿಣದ ಬಕೇಟ್ ನನ್ನ ತಲೆಗೆ ಬಡಿದು ನನಗೆ ತೀವ್ರ ಸ್ವರೂಪದ ಗಾಯವಾಗಿ ಪ್ರಜ್ಞೆ ತಪ್ಪಿ ಹೋಗಿರುತ್ತದೆ, ಆದರೆ ನನ್ನ ಅಣ್ಣ ಚೇತನ್ ಆರೋಪಿತರು ನನಗೆ ಹಲ್ಲೆ ಮಾಡಿರುತ್ತಾರೆ ಎಂದು ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತಾನೆ?

ಉತ್ತರಃ ಸರಿಯಲ್ಲ.

ಪ್ರಶ್ನೆಃ 14) ನಾನು ನನ್ನ ಅಣ್ಣ 1 ನೇ ಆರೋಪಿ ಮತ್ತು ಆತನ ಹೆಂಡತಿ ಮೇಲೆ ಹಲ್ಲೆ ಮಾಡಿ ಮತ್ತು ಅವರ ಮನೆಯ ಶೆಡ್ ನ್ನು ಜೆ ಸಿ ಬಿ ಯಿಂದ ಕೆಡವಿದ್ದರಿಂದ ಅವರು ನಮ್ಮ ಮೇಲೆ ದೂರನ್ನು ಕೊಡಬಹುದು ಎಂದು ಹೇಳಿ ನನ್ನ ಅಣ್ಣ ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತಾನೆ?

ಉತ್ತರಃ ಸರಿಯಲ್ಲ.

ಪ್ರಶ್ನೆಃ 15) ಇದೂವರೆಗೂ ನೀನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ?

ಉತ್ತರಃ ಹೇಳಿಕೆ ಕೊಟ್ಟಿದ್ದೇನೆ.

ಪ್ರಶ್ನೆಃ 16) ನಾವುಗಳು ನಮ್ಮ ತೋಟಕ್ಕೆ ಹಾಕಿದ್ದ ಮುಳ್ಳು ಬೇಲಿಯನ್ನು ಕಿತ್ತು 1 ನೇ ಆರೋಪಿಯ ಮನೆಯ ಹಿತ್ತಲಲ್ಲಿ ಇದ್ದ ತೋಟದ ಜಮೀನಿನಲ್ಲಿ ಹಾಕಿದ್ದೆವು ಆಗ 1 ನೇ ಆರೋಪಿ ಸದರಿ ಮುಳ್ಳು ಬೇಲಿಗೆ ಬೆಂಕಿ ಹಾಕಿದ್ದರಿಂದ, ನಮ್ಮ ತೋಟದಲ್ಲಿರುವ ಗಿಡಗಳು ಸುಟ್ಟು ಹೋಗಿರುತ್ತವೆ ಎಂದು ನಮ್ಮ ಮನೆಯ ಮುಂಭಾಗದ ರಸ್ತೆಯಲ್ಲಿ ಮಂಜುನಾಥನ ಮನೆಯ ಹತ್ತಿರ 1 ನೇ ಆರೋಪಿಯನ್ನು ನಾವು ಅಡ್ಡ ಹಾಕಿ ಗಲಾಟೆ ಮಾಡುತ್ತಿದ್ದೆವು, ಆಗ

ಚಾಸಾ3 ರವರು ನನ್ನನ್ನು ಮತ್ತು ನನ್ನ ಅಣ್ಣ ಚೇತನ್ ನ್ನು ಕರೆದುಕೊಂಡು ಬಂದು ನಮ್ಮ ಮನೆಗೆ ಬಿಟ್ಟು ಹೋಗಿರುತ್ತಾನೆ?

ಉತ್ತರಃ ಸರಿ.

ಪ್ರಶ್ನೆಃ 17) ನಂತರ ನಾನು ಮತ್ತು ನನ್ನ ಅಣ್ಣ ಚೇತನ್ ಜೆ ಸಿ ಬಿ ಯಿಂದ 1 ನೇ ಆರೋಪಿಯ ಮನೆಯ ಹಿತ್ತಲಲ್ಲಿ ಇದ್ದ ಶೆಡ್ ಮತ್ತು ಶೌಚಾಲಯವನ್ನು ಕೆಡವಿರುತ್ತೇವೆ, 1 ನೇ ಆರೋಪಿ ಮತ್ತು ಆತನ ಹೆಂಡತಿಗೆ ಹಲ್ಲೆ ಮಾಡಿರುತ್ತೇವೆ?

ಉತ್ತರಃ ಸರಿಯಲ್ಲ.

ಪ್ರಶ್ನೆಃ 18) ಆ ಕಾರಣಕ್ಕಾಗಿ ಪೋಲೀಸರು 1 ನೇ ಆರೋಪಿಯ ಮನೆಯ ಹಿತ್ತಲಿನಲ್ಲಾಗಲೀ ಮತ್ತು ನಮ್ಮ ತೋಟದಲ್ಲಾಗಲೀ ಯಾವುದೇ ಸ್ಥಳ ಪಂಚನಾಮೆ ಮಾಡಿರುವುದಿಲ್ಲ?

ಉತ್ತರಃ ಗೊತ್ತಿಲ್ಲ.

ಪ್ರಶ್ನೆಃ 19) ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ?

ಉತ್ತರಃ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).